
ಯೋಧರು ಕತ್ತಿಗಳನ್ನು ಹಿಡಿದು ಹೋರಾಟದಲ್ಲಿ ತೊಡಗುತ್ತಾರೆ. ತಂದೆ–ಮಗನ ವಯಸ್ಸಿನ ಯೋಧರ ಬಲಾಬಲಕ್ಕೆ ಸಾಕ್ಷಿಯಾಗಿ ರೆಕ್ಕೆತೊಟ್ಟ ಕೆಂಪುಮುಡಿಯ ಹೆಣ್ಣು ನಿಂತಿದ್ದಾಳೆ. ಹೋರಾಟದ ಕೊನೆಯಲ್ಲಿ ತಂದೆಯ ವಯಸ್ಸಿನ ಯೋಧನು ಮಗನ ವಯಸ್ಸಿನ ಯೋಧನನ್ನು ಕೊಲ್ಲುತ್ತಾನೆ. ಆ ಕ್ಷಣದಲ್ಲಿ ಅವನಿಗೆ ಸಾಯುತ್ತಿರುವವನ ಮುಂಗೈಯಲ್ಲಿದ್ದ ಕಡಗ ಕಂಡು ತೀವ್ರ ದುಃಖವಾಗುತ್ತದೆ. ಅವನ ವರ್ತನೆಯಿಂದ ತಿಳಿಯದೆ ತನ್ನಿಂದಾದ ತಪ್ಪಿಗೆ ಅವನು ಪಶ್ಚಾತ್ತಾಪ ಪಡುತ್ತಿದ್ದಾನೆಂದು ನಾಟಕ ನೋಡುತ್ತಿರುವವರಿಗೆ ಅನುಭವವಾಗುತ್ತದೆ. ಇಡೀ ನಾಟಕದ ಟೆಂಟು ಆ ಭೀಕರ ಆರ್ತನಾದಕ್ಕೆ ತತ್ತರಿಸುತ್ತಿದೆ, ಆಗಲೇ ಕೆಂಪುಮುಡಿಯ ಹೆಣ್ಣು ಮಾತನಾಡಲು ತೊಡಗುತ್ತಾಳೆ. ಅವಳ ಕಣ್ಣೀರು ನೋವಾಗಿ, ನೋವು ಆರ್ತನಾದವಾಗುತ್ತ ಕ್ರಮೇಣ ಮಹಾಕಾವ್ಯವಾಗುತ್ತದೆ. ನೋವು ಅವಳ ಕಾವ್ಯದ ಜೀವ. ಆ ಕವಿತೆಯಲ್ಲಿ ಕೋಪವಿದೆ, ತನಗಾದ ಅನ್ಯಾಯಗಳ ಬಗ್ಗೆ ದುಃಖವಿದೆ, ತನ್ನ ಬದುಕಿಗೊದಗಿದ ಸಂಕಟದ ಭಿತ್ತಿಯಿದೆ. ಅವಳ ನೋವು ಅಲ್ಲಿದ್ದ ಪ್ರತಿಯೊಬ್ಬರ ನೋವೂ ಆಗುತ್ತದೆ. ಇಡೀ ದೃಶ್ಯದ ತೀವ್ರತೆಯಿಂದ ಸೆಮ್ ತತ್ತರಿಸುತ್ತಾನೆ.




ಅಲ್ಲಿಂದ ಮುಂದೆ, ಕೆಂಪುಮುಡಿಯ ಹೆಣ್ಣಿನ ಒಂದು ನೋಟಕ್ಕೆ ಕಾತರಿಸುವುದು ಮತ್ತು ಭೂಮಿಯನ್ನು ಆಳಕ್ಕೆ ಅಗೆಯುತ್ತ ನೀರಿನ ಸೆಲೆ ಒಡೆಯುವುದಕ್ಕೆ ಪ್ರತಿ ದಿನ ಕಾಯುವುದು–ಈ ಎರಡೂ ಎಳೆಗಳು ಸೆಮ್‌ನಲ್ಲಿ ಒಂದರೊಡನೊಂದು ಬೆರೆಯುತ್ತ ಕಾದಂಬರಿ ತೆರೆದುಕೊಳ್ಳುತ್ತದೆ. ಇವೆರಡು ಸೆಳೆತಗಳ ನಡುವೆ ತನ್ನ ಮುಂದಿನ ವಿದ್ಯಾಭ್ಯಾಸಕ್ಕೆ ಅಗತ್ಯವಿರುವ ಹಣವನ್ನು ದುಡಿದು ಗಳಿಸಲು ಬಾವಿ ತೋಡುವ ಕೆಲಸಕ್ಕೆ ಬಂದಿರುವ ಸೆಮ್‌ನ ಉದ್ದೇಶವು ಸ್ವಲ್ಪಕಾಲ ಮರೆತೇ ಹೋಗುತ್ತದೆ. ಒಂದು ರಾತ್ರಿ, ಮೆಹಮೂತ್‌ನ ಕಣ್ಣುತಪ್ಪಿಸಿ ಕೆಂಪುಮುಡಿಯ ಹೆಣ್ಣನ್ನು ನೋಡಲು ಬರುವ ಸೆಮ್‌ನನ್ನು ಅವಳ ರೂಪ, ವಿಚಾರ ಮತ್ತು ಭಾವನೆಗಳು ಇನ್ನಿಲ್ಲದಂತೆ ಸೆಳೆದು ಇಬ್ಬರೂ ಪರಸ್ಪರ ಒಪ್ಪಿಗೆಯಲ್ಲಿ ಕೂಡುತ್ತಾರೆ. ಇದಾದ ಮರುದಿನವೇ ನಾಟಕದ ಕಂಪನಿ ಆ ಊರನ್ನು ಬಿಟ್ಟು ಮತ್ತೊಂದು ಊರಿಗೆ ಹೊರಡಬೇಕು.

ಮರುದಿನ ಅನಿರೀಕ್ಷಿತವಾಗಿ ಸೆಮ್ ಕೈಯಲ್ಲಿದ್ದ, ಬಾವಿಯಾಳದ ಮಣ್ಣು ತುಂಬಿದ ಬಕೆಟ್ಟು ಕೈತಪ್ಪಿ ಜಾರಿ ಬಾವಿಯೊಳಗಿರುವ ಮೆಹಮೂತ್‌ನೆಡೆಗೆ ಬೀಳುತ್ತದೆ. ನೋವಿನ ಆರ್ತನಾದದ ನಂತರ ಸಂಪೂರ್ಣ ಮೌನದಿಂದ ಹೆದರಿದ ಸೆಮ್ ಅಲ್ಲಿಂದ ಇಸ್ತಾಂಬುಲ್‌ಗೆ ಓಡಿಹೋಗುತ್ತಾನೆ. ಮುಂದೊಂದು ದಿನ ದೊಡ್ಡ ಉದ್ಯಮಿಯಾದಾಗಲೂ ಅವನ ಅಂತರಂಗದಲ್ಲಿ ಅಂದಿನ ಘಟನೆ ಮತ್ತು ಮೆಹಮೂತ್ ಸಾವಿಗೆ ತಾನು ಕಾರಣವಾದದ್ದರ ನೋವು ಕಾಡುತ್ತಿರುತ್ತದೆ. ಸೆಮ್‌ಗೆ ಸ್ವತಃ ಮಕ್ಕಳಾಗದಿರುವುದು; ಕೆಂಪುಮುಡಿಯ ಹೆಣ್ಣಿನಿಂದ ಹುಟ್ಟಿದ ತನ್ನ ಮಗನ ಸತ್ಯ ಅಚಾನಕ್ಕಾಗಿ ಇವನೆದುರು ಬರುವುದು; ತಂದೆಮಗನ ಮುಖಾಮುಖಿ, ಈ ಮುಖಾಮುಖಿಯಲ್ಲಿ ಮೆಹಮೂತ್ ಬಾವಿ ದುರಂತದಲ್ಲಿ ಬದುಕುಳಿದಿದ್ದ ಸತ್ಯ ತಿಳಿಯುವುದು; ಮೆಹಮೂತ್‌ನೆ ಸೆಮ್‌ನ ಮಗನನ್ನೂ ತಂದೆಯಾಗಿ ಸಾಕುವುದು; ಸೆಮ್ ಮತ್ತು ಅವನ ಮಗನ ಸಂಘರ್ಷದಲ್ಲಿ